ಮಧ್ಯಂತರ ಅರ್ಜಿ ಆದೇಶ ನಂ.4 ಮತ್ತು 5ರ ಆದೇಶದ ಮೇರೆಗೆ, ಇಂದು ದಿನಾಂಕ:05/09/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರಃ ಶ್ರೀ ಎಸ್.ಎಸ್.ಕೆ. ವಕೀಲರಿಂದಃ-**

2. ಈ ಪ್ರಕರಣಗಳಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

| | |
|---|---|
| Ex.R.1 | Order-sheet relating to enquiry, |
| Ex.R.2 | Noting sheet of Divisional Controller(D.C.), |
| Ex.R.3 | Absent report by Depot. Manager, |
| Ex.R.4 | Calling letter to join the duty, to the 1st party/ petitioner, |
| Ex.R.5 | History Sheet regarding absent, |
| Ex.R.6 | Show-cause notice dtd:17/3/2014, |
| Ex.R.7 | Request letter to perform duty dtd:25/8/2014, |
| Ex.R.8 | Forwardal letter annexing Ex.R.7 alng with medical certificate and mustoroll of the petitioner/1st party sent by Depot. Manager to D.C., |
| Ex.R.9 | Permission letter issued by D.C., |
| Ex.R.10 | Letter of appointment of Enquiry Officer dtd:6/12/2014, |
| Ex.R.11 to 14 | Enquiry notices, |
| Ex.R.15 | Preliminary enquiry proceedings, |
| Ex.R.16 | Enquiry notice dtd:11/4/2015, |
| Ex.R.17 | Enquiry proceedings dtd:28/4/2015, |
| Ex.R.18 | Enquiry findings, |
| Ex.R.19 | Show-cause notice dtd:23/9/2015, |
| Ex.R.20 | Removal order dtd:22/12/2015, |
| Ex.R.21 | Appellate Authority Order dtd:17/1/2022, |

2. ಅರ್ಜಿದಾರರಿಗೆ ಯೋಗ್ಯ ಅವಕಾಶ ನೀಡಿ, ಸದರಿ ದಾಖಲೆಗಳ ಅನ್ವಯ ಅವನನ್ನು ವಜಾಗೊಳಿಸಿರುವುದು ಉರ್ಜಿತವಾಗಿರುತ್ತದೆ. ಆದ್ದರಿಂದ ಅರ್ಜಿದಾರನ ಅರ್ಜಿಯನ್ನು ವಜಾಗೊಳಿಸಬೇಕು.

**ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಕೆ.ಸಿ.ಪಿ. ವಕೀಲರಿಂದಃ-**

3. ನಿ.ಆರ್-1 ರಲ್ಲಿ ವರದಿಗಾರರು ಆದ ನಂತರ ಹಾವೇರಿ ಅಂತಾ ಬರೆದಿರುವುದನ್ನು ತಿದ್ದುಪಡಿ ಮಾಡಿ ಎಚ್.ಕೆ.ಆರ್. ಅಂತಾ ಬರೆದಿದ್ದು ಇದದೆ. ಆ ತಿದ್ದುಪಡಿಗೆ ಯಾವುದೇ ಸಣ್ಣ ರುಜು ಇರುವುದಿಲ್ಲ. ಹಾವೇರಿ ಅಂತಾ ಬರೆದ ಇಂಕಿಗೂ ಮತ್ತು ಎಚ್.ಕೆ.ಆರ್. ಬರೆದ ಇಂಕಿಗೂ ವ್ಯತಾಸ ಇದೆ ಅಂದರೆ ಸರಿ. ನಿ.ಆರ್-1 ರ 2 ಮತ್ತು 3 ನೇ ಸಾಲುಗಳಲ್ಲಿ ಶಬ್ದಗಳನ್ನು ಕಾಟು ಹಾಕಲಾಗಿದೆ ಮತ್ತು ದಿನಾಂಕ ತಿದ್ದುಪಡಿ ಮಾಡಲಾಗಿದೆ ಅಂದರೆ ಸರಿ. ಅವುಗಳಿಗೂ ಸಹ ಯಾವುದೇ ಸಣ್ಣ ರುಜು ಇರುವುದಿಲ್ಲ ಅಂದರೆ ಸರಿ. ದಿನಾಂಕಃ28/4/2015 ರ ನಂತರ ಯಾವ ಪ್ರಕ್ರಿಯ ನಡೆಯಿ ಎಂಬ ಬಗ್ಗೆ ನಮುದಾಗಿಲ್ಲ ಅಂದರೆ ಸದರಿ ದಿನದಂದೇ ವಿಚಾರಣೆ ಮುಕ್ತಾಯಗೊಂಡಿದ್ದರಿಂದ ಮುಂದಿನ ಯಾವುದೇ ನಡಾವಳಿಗಳನ್ನು ಬರೆದಿಲ್ಲ ಅಂತಾ ಹೇಳುತ್ತಾರೆ. ದಿನಾಂಕಃ28/4/2015 ರ ನಡಾವಳಿಯಲ್ಲಿ ಸಂರಕ್ಷಣಾ ಹೇಳಿಕೆ ನೀಡಲು ಕಾಲಾವಕಾಶ ನೀಡುವ ಕುರಿತು ಇರುತ್ತದೆ ಅಂದರೆ ಸರಿ. ಆ ರೀತಿ ಸಂರಕ್ಷಣಾ ಹೇಳಿಕೆ ನೀಡಲು ಕಾಲಾವಕಾ ನೀಡಿದ್ದರೋ ಇಲ್ಲವೋ ಎಂಬ ಬಗ್ಗ ನಿ.ಆರ್-1 ರ ಪುಟ ಸಂಖ್ಯೆ-2 ರಲ್ಲಿ ನಮೂದಾಗಿಲ್ಲ ಅಂದರೆ ಸರಿ. ನಿ.ಆರ್-1 ವಿಚಾರಣೆ ಅಪೂರ್ಣವಾಗಿದೆ ಅಂದರೆ ಸರಿಯಲ್ಲ. ನಿ.ಆರ್-8 ರ ಜೊತೆಗೆ ಹಾಜರುಪಡಿಸಿದ ದಾಖಲೆಯಲ್ಲಿ ಅರ್ಜಿದಾರರ ವೈದ್ಯಕೀಯ ಪ್ರಮಾಣ ಪತ್ರ ಇರುತ್ತವೆ ಅಂದರೆ ಸರಿ. ವೈದ್ಯಕೀಯ ಪ್ರಮಾಣ ಪತ್ರ ಮತ್ತು ದಾಖಲೆಗಳ ಬಗ್ಗೆ ವಿವರಣೆಯನ್ನು ನಿ.ಆರ್-8 ರಲ್ಲಿ ನಮೂದು ಮಾಡಿಲ್ಲ ಅಂದರೆ ಸರಿ. ನಾನು ಅರ್ಜಿದಾರನಿಗೆ ಸಂಬಂಧಿಸಿದಂತೆ ನಿಷ್ಪಕಪಾತವಾಗಿ ವಿಚಾರಣೆಯನ್ನು ಕೈಗೊಂಡಿಲ್ಲ ಅಂದರೆ ಸರಿಯಲ್ಲ. ನಿ.ಆರ್-17 ರಲ್ಲಿ ಸಂರಕ್ಷಣಾ ಹೇಳಿಕೆಯನ್ನು ನೀಡಲು ಅರ್ಜಿದಾರನಿಗೆ ದಿನಾಂಕಃ7/5/2015 ರವರೆಗೆ ಕಾಲಾವಕಾಶ ನೀಡಲಾಗಿತ್ತು. ದಿನಾಂಕಃ7/5/2015 ರವರೆಗೆ ಯಾವ ನಡಾವಳಿಗಳು ನಡೆದವು ಎಂಬ ಬಗ್ಗ ನಿ.ಆರ್-17 ರಲ್ಲಿ ವಿವರಣೆ ಇಲ್ಲ ಅಂದರೆ ಸರಿ. ನಿ.ಆರ್-1 ಮತ್ತು ನಿ.ಆರ್-17 ಕ್ಕೆ ಯಾವುದೇ ಹೊಂದಾಣಿಕೆ ಇಲ್ಲ ಅಂದರೆ ಸರಿಯಲ್ಲ. ನಿ.ಆರ್-11 ರಲ್ಲಿ ನೋಟಿಸ್ ಹೊರಡಿಸಿದ ದಿನಾಂಕ ನಮೂದಾಗಿಲ್ಲ ಅಂದರೆ ಸರಿ. ನಿ.ಆರ್-11 ರಿಂದ 14 ರಲ್ಲಿ ನೀಡಿದ ತಿಳುವಳಿಕೆ ನೋಟಿಸ್‌ದಲ್ಲಿ ತಿಳಿಸಿದ ವಿಚಾರಣಾ ದಿನಾಂಕಗಳಿಗೂ ಮತ್ತು ನಿ.ಆರ್-1 ರಲ್ಲಿಯ ನಡಾವಳಿ ದಿನಾಂಕ ಗಳಿಗೂ ಹೊಂದಾಣಿಕೆಯಾಗುವುದಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರನಿಗೆ ನಾವು ಉರ್ಜಿತ ವಾದ ನೋಟಿಸ್ ಗಳನ್ನು ನೀಡಿಲ್ಲ ಮತ್ತು ವಿಚಾರಣೆಯಲ್ಲಿ ಅವಕಾಶವನ್ನು ನೀಡಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರನು ದಾಖಲು ಮಾಡಿದ ದಾಖಲೆಗಳನ್ನು ತುಲನಾತ್ಮಕವಾಗಿ ಪರಿಶೀಲನೆ ಮಾಡಿಲ್ಲ ಅಂದರೆ

ಸರಿಯಲ್ಲ. ನನ್ನ ವಿಚಾರಣಾ ಕಾಲದಲ್ಲಿ ಅರ್ಜಿದಾರ ಸಕಾರಣಕ್ಕಾಗಿಯೇ ಗೈರು ಹಾಜರಿದ್ದ ಅಂತಾ ಕಂಡುಬಂದಿತ್ತು ಅಂದರೆ ಸರಿಯಲ್ಲ. ನಾನು ಅರ್ಜಿದಾರನ ವಿರುದ್ಧ ಮತ್ತು ಎದುರುದಾರ ಸಂಸ್ಥೆಯುವರ ಪರವಾಗಿ ಫಲಿತಾಂಶವನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ನಿ.ಆರ್-1 ರಲ್ಲಿಯ ಮೊದಲನೇ ಪುಟದಲ್ಲಿ ಎಲ್ಲಾ ವಿಚಾರಣಾ ದಿನದಂದು ನಡೆದ ನಡಾವಳಿಗಳಿಗೆ ಹಾಜರಿದ್ದವರ ಎಲ್ಲರ ಸಹಿಗಳನ್ನು ಪಡೆದುಕೊಂಡಿರುತ್ತೇನೆ, ಆದರೆ ಎರಡನೆ ಪುಟದಲ್ಲಿ ವಿಚಾರಣಾ ನಂತರ ನಡಾವಳಿಗಳಿಗೆ ಹಾಜರಿದ್ದವರ ಸಹಿಗಳನ್ನು ಪಡೆದುಕೊಂಡಿಲ್ಲ ಅಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.